ಕೃತಿಕಾರರೊಡನೆ ದು. ಸರಸ್ವತಿ, ಲಕ್ಷ್ಮೀಶ ತೋಳ್ಪಾಡಿ, ಎನ್.ಎ.ಎಂ. ಇಸ್ಮಾಯಿಲ್, ಟಿ.ಎಸ್. ಸತ್ಯನಾಥ್, ಎ. ನಾರಾಯಣ, ರಘುನಂದನ, ಐವನ್ ಫ್ರಾನ್ಸಿಸ್ ಲೋಬೋ ಮತ್ತು ಎಂ. ಪ್ರಭಾಕರ ಜೋಶಿ- ಇತರ ಅರ್ಥಸಾಧ್ಯತೆಗಳನ್ನು ತೋರುತ್ತಾ ಕೃತಿಗೆ ಕಸುವು ತುಂಬಿದ್ದಾರೆ. 'ಸಾಂಸ್ಕೃತಿಕ ಕೊತ್ವಾಲರು' ಆಡಿಸುವ ಬೊಂಬೆಗಳಾಗಿರುವ ಕಲಾವಿದರು, ಮನವಿರದ ಮೆಚ್ಚುವ ಪ್ರೇಕ್ಷಕರೆಂಬ ಖಳ ಪಾತ್ರಗಳನ್ನು ಓದುಗ ಪ್ರೇಕ್ಷಕರಿಗೆ ತಲುಪಿಸುವ ಕೆಲಸದಲ್ಲಿ ಕೈ ಜೋಡಿಸಿದ್ದಾರೆ.

'ಕೇಳು ಜನಮೇಜಯನೇ' ಎಂಬ ಪ್ರವೇಶ ಯಕ್ಷಗಾನ, ಬಯಲಾಟಗಳ ಭೌಗೋಳಿಕ ವ್ಯಾಪ್ತಿ, ಮುಖ್ಯ ಲಕ್ಷಣ ಮತ್ತು ಪುಸ್ತಕದ ಉದ್ದೇಶಗಳನ್ನು ಮಂಡಿಸುತ್ತದೆ– ಕರಾವಳಿಯ ಜನಸಮುದಾಯದ ಆಟ– ಕೂಟಗಳ ಕಲಾಭಿವ್ಯಕ್ತಿ ಒಂದು ರಂಗಭಾಷೆಯಾಗಿ ಹೇಗೆ ಪ್ರಕಟಗೊಂಡಿದೆ? ಯಕ್ಷಗಾನದ ಭಾಷೆಯಲ್ಲಿ ಪ್ರತಿಫಲಿಸುತ್ತಿರುವ ಕರಾವಳಿಯ ಸಾಮಾಜಿಕತೆ ಮತ್ತು ಸಂಸ್ಕೃತಿಯ ಸ್ವರೂಪವೇನು? ಕಲೆ ಮತ್ತು ಅದನ್ನು ಕಟ್ಟಿರುವ ಜನಸಮುದಾಯದ ಸಾಮಾಜಿಕ ಇತಿಹಾಸವನ್ನು ಮರುರಚಿಸುವ ಬಗೆ ಹೇಗೆ? ಇವು ಮೂರು ಪ್ರಶ್ನೆಗಳನ್ನು ಪರಿಶೀಲಿಸುವುದು ಈ ಕೃತಿಯ ಮುಖ್ಯ ಉದ್ದೇಶಗಳು.

'ಕಲೇತಿಹಾಸದ ಚಿತ್ರ ಸಂಪುಟ' ಎಂಬ ಎರಡನೆಯ ಅಧ್ಯಾಯವು, ಪಂಪನ ಮಾತಿನಲ್ಲಿ ಹೇಳುವುದಾದರೆ, 'ಕೇಳಿದ' ಕಥೆ, 'ಅನುಭವಕ್ಕ ಬಂದ' ಕಥೆ ಮತ್ತು ಕಣ್ಣಾರೆ 'ಕಂಡ' ಕಥೆ, ಕಥನಗಳನ್ನು ಬಳಸಿಕೊಂಡು 'ವಾಸ್ತವವನ್ನು ಹಿಡಿದಿಡುವಲ್ಲಿ ಐಡಿಯಾಲಜಿಗಳು ಹೇಗೆ ಸೋಲುತ್ತವೆ' ಎಂದು ಮನದಟ್ಟಾಗುವ ಹಾಗೆ ವಿವರಿಸುತ್ತದೆ. ಕರಾವಳಿಯ ಸಮುದಾಯಗಳ ಸಂಬಂಧ– ಸಂದರ್ಭಗಳಿಗೆ ನಿಷ್ಠವಾಗಿ ಕಲೆಯ ಅರ್ಥ ಸೃಷ್ಟಿಯಾಗುವ ಬಗೆ, ತಳ ಸಮುದಾಯಗಳ ಕಲೆಯಾಗಿದ್ದ ಯಕ್ಷಗಾನ ಕ್ರಮೇಣ ಮೇಲುಜಾತಿಗಳ ವಶಕ್ಕೆ, ರಾಜಕೀಯ ಪಕ್ಷಗಳ ಹಿಡಿತಕ್ಕೆ ಸಿಕ್ಕಿದ ರೀತಿಯನ್ನು ಕಟ್ಟಿಕೊಡುತ್ತದೆ. ಯಕ್ಷಗಾನದ




ಕೃತಿ: ಅಳವು ಅರಿಯದ ಭಾಷೆ
(ಕಲೆ, ಸಮಾಜ, ಇತಿಹಾಸ)
ಲೇ: ನಿತ್ಯಾನಂದ ಬಿ. ಶೆಟ್ಟಿ,
ಪುಟಗಳು : 352, ಬೆಲೆ ರೂ. 600
ಪ್ರ: ಕನ್ನಡ ಸಂಘ, ಕಾಂತಾವರ (ರಿ) ಕಾಂತಾವರ, ಉಡುಪಿ ಜಿಲ್ಲೆ
ಮೊಬೈಲ್:9900701666

ಪರಿಶೀಲನೆಯ ಮೂಲಕ ಸಾಮಾಜಿಕ ಚಲನೆಯನ್ನು ಹೇಗೆ ಗುರುತಿಸಬಹುದು ಎಂಬ ಸೂಚನೆಯನ್ನು ನೀಡುತ್ತದೆ. ಕಥಾ ನಾಯಕರಲ್ಲಿ ಒಬ್ಬರಾದ ಕುಂಬಳೆ ಸುಂದರರಾಯರ ಚಿತ್ರಣವೂ ನಡೆಯುತ್ತದೆ. ಈ ಅಧ್ಯಾಯವು ಯಕ್ಷಗಾನದ ಚರಿತ್ರೆ ಚಿತ್ರಣವೂ ಹೌದು, ಯಕ್ಷಗಾನವು ಸೂಚಿಸುವ ಸಾಮಾಜಿಕ ವಾಸ್ತವಗಳ ನಿರೂಪಣೆಯೂ ಹೌದು. 'ದುಡುಕಿನ ರಾಜಕೀಯ ಸದ್ಭಾವನೆ'ಯು ಯಕ್ಷಗಾನದ ಗತಕಾಲದ ಬಗ್ಗೆ, ಮಹಿಳೆಯರ ಪಾಲ್ಗೊಳ್ಳುವಿಕೆ ಇತ್ಯಾದಿಗಳ ಬಗ್ಗೆ